ನಿಜಜೀವನದಲ್ಲಿ ಪದ್ಮಳಾಗಿ, ತನ್ನ ಆದರ್ಶದ ಬೊಗಳೆಗೆ ಈ ರೀತಿ ಸವಾಲು ಹಾಕುತ್ತಾಳೆ ಅಂದ್ಕೊಂಡಿರಲಿಲ್ಲ ತಾನು. ಅವೇ ನಾಟಕದ ಮಾತುಗಳನ್ನು ನೆನಪಿಸುತ್ತ, ಆಗಾಗ, 'ನೀನೂ ನಾಟಕದ ರಾಮಣ್ಣನೇ ಸರಿ. ಆ ನಾಟಕದ ರಾಮಣ್ಣಾ... ಹ್ಹೀ ಹ್ಹಿ...' ನಗುತ್ತ ಮೂದಲಿಸುತ್ತಾಳೆ ಪದ್ಮ. ಅಭಿನಯದಲ್ಲೂ ತನಗಿಂತ ಒಂದು ಕೈ ಮೇಲೆ. ತನ್ನಂತೆ ಇವಳೇನು ಹವ್ಯಾಸಕ್ಕೆ ಬಣ್ಣ ಹಚ್ಚಿಕೊಂಡವಳಲ್ಲ. ಅದವಳ ಮನೆತನದ ಬಳುವಳಿ.

ಅಂದು, ತಾನು ಉನ್ಮಾದದ ಸ್ಥಿತಿಯಲ್ಲಿದ್ದಾಗ, ಪದ್ಮಳ ರೂಪಕ್ಕೆ ಮರುಳಾಗಿದ್ದಂತೂ ಖರೆ. ಆಕೆಯ ಮೇಲಿನ ಮೋಹ ಹೆಚ್ಚಾಗುತ್ತಿದ್ದಂತೆ, ಕನಸುಗಳಿಗೆ ಬಣ್ಣತುಂಬಲು ತೊಡಗಿದ್ದೂ ಹೌದು. ಆದರೆ, ಪದ್ಮ ಮಾತ್ರ ಗಜಗಂಭೀರೆ. ಈ ಉಚ್ಚ-ನೀಚ, ಜಾತಿ ಧರ್ಮದ ಎಲ್ಲೆದಾಟಿ, ವಿಧಿವತ್ತಾಗಿ ಪದ್ಮಳ ಕೈ ಹಿಡಿಯುವ ಆದರ್ಶದ ಛಲ ತನಗೆ. ಹೀಗಿರುವ ಆ ದಿನ... ಆದಿನ, ಹೂಗಾರ ನಿಂಗಪ್ಪನಿಂದ ಸತ್ಯಸಂಗತಿ ಗೊತ್ತಾಗಿ ದಿಗ್ಭ್ರಾಂತಗೊಂಡೆ.

ಅನತಿ ಕಾಲದಿಂದಲೂ ಅಪ್ಪನ ಸಹಚರನಾಗಿ, ಭಾಗವತ ಪಾತ್ರ ಮಾಡುವ ನಿಂಗಪ್ಪ, 'ತಮಾ, ಈ ಪದ್ಮವ್ವಂದ್ರ ಯಾರಂತ ಮಾಡೀ?' ಎಂದು ಕೇಳಿದವ, ಪದ್ಮಳ ತಾಯಿ ರತ್ನಾಬಾಯಿಯನ್ನು ಅಪ್ಪ ಇಟ್ಟುಕೊಂಡಿದ್ದೂ, ಕೊನೆಯ ದಿನಗಳಲ್ಲಿ ಹೆಂಡತಿಗಿಂತ ಹೆಚ್ಚಾಗಿ ಅಪ್ಪನನ್ನು ಅವಳು ನೋಡಿಕೊಂಡದ್ದೂ, ಅವರಿಬ್ಬರ ಸಾಂಗತ್ಯದ ಫಲವೇ ಈ ಪದ್ಮವ್ವ...' ಎನ್ನುವುದನ್ನು ಕೇಳಿ ಹುಚ್ಚನಂತಾಗಿದ್ದೆ.

ತನ್ನ ವರ್ತನೆ ಗಮನಿಸುತ್ತಿದ್ದನೇನೊ ನಿಂಗಪ್ಪ, ಮುಂದೆ ಅನಾಹುತವಾಗಬಾರದು ಅಂದ್ಕೊಂಡು ತನ್ನನ್ನು ಎಚ್ಚರಿಸಿರಬಹುದೆ? ಇದ್ದಿರಬಹುದು ಅಂತೆನಿಸಿತು. ಒಂದೆರಡು ದಿನ ಚಡಪಡಿಸಿದ ತನಗೆ, ಊಟ ನಿದ್ರೆ ಯಾವುದೂ ಬೇಡವೆನಿಸಿತ್ತು. ಕ್ರಮೇಣ ಪಶ್ಚಾತ್ತಾಪ ಭಾವ ಹುಟ್ಟಿ, ತಾನೇ ಮುಂದಾಗಿ ಪದ್ಮಳ ಮುಂದೆ ಸತ್ಯ ಹೇಳಿದರೆ, 'ನನಗೆ ಮುಂಚೇನೆ ಗೊತ್ತಿತ್ತು' ಅದೇ ಗಂಭೀರ ನಿರ್ಭಾವುಕ ಪ್ರತಿಕ್ರಿಯೆ.

'ಮತ್ತೆ, ಗೊತ್ತಿದ್ದು ಗೊತ್ತಿದ್ದೂ?'

'ಹೇಳಿದ್ದರ ನೀನೆಲ್ಲಿ ನಂಬತ್ತಿದ್ದಿ? ಏನೋ ಮಸಲತ್ತದ ಇದರಾಗ ಅಂದ್ಕೊಳ್ಳುತ್ತಿದ್ದಿ, ಹೌಂದಲ್ಲೊ? ಇಲ್ಲಾ, ನಮ್ಮಪ್ಪನ ಹಾದರಕ್ಕ ಹುಟ್ಟಿದವಳು ನೀನು ಅಂತೆಲ್ಲಾ ಹೀಯಾಳಿಸಿ... ಛೀ... ಥೂ... ಅಂತ...'

'ಹಂಗ್ಯಾಕ್ ಅಂತೀ ಪದ್ಮಾ, ನಾವಿಬ್ಬರೂ ಒಂದೇ ರಕ್ತಾ ಹಂಚ್ಕೊಂಡು ಹುಟ್ಟಿದವರಲ್ಲೇನು?'

'ಇರಬೌದು, ಬಣ್ಣ ಒಂದೇ ಇದ್ದರೂ, ಕಾಗೆ ಕಾಗೇನೆ, ಕೋಗಿಲೆ ಕೋಗಿಲೇನೆ'


'ಅದುಬೇರೆ ಇದುಬೇರೆ. ನಮ್ಮಿಬ್ಬರನ್ನು ಹುಟ್ಟಿಸಿದ ಅಪ್ಪ ಒಬ್ಬನೇ ಅಲ್ಲೇನು?'

'ಪ್ರೊಫೆಸರ್ ಸಾಹೇಬ್ರ, ನಾವು ಬಣ್ಣಕ್ಕೆ ಮುಖಕೊಟ್ಟವರು. ನಮಗದು ಅನ್ನದ ತುತ್ತು, ನಿಮ್ಮಂಥ ಉತ್ತಮರಿಗೆ ವರ್ಣವೆಂಬುದು ಅಂತಸ್ತಿನ ಸೊಕ್ಕು. ಆದ್ರ... ಆದ್ರ... ನಮ್ಮ ಹಾಗಲ್ಲ ನೀವು. ನೀವೆಲ್ಲಾ ವರ್ಣ ನಂಬೋ ಜನಾ.'

'ಅಲ್ಲಾ ಪದ್ಮಾ, ವರ್ಣಕ್ಕ ಮತ್ತೆ ಬಣ್ಣ ಅಂಬೋ ಅರ್ಥಾನೂ ಅದ, ಗೊತ್ತಿಲ್ಲಾ ನಿನಗ?'

'ಅರ್ಥ ಒಂದೇ ಇದ್ದರೂ, ಅದರಿಂದ ಉದ್ಭವಿಸುವ ಭಾವ ಮಾತ್ರ ಒಂದೇ ಇರೋದಿಲ್ಲಲ್ಲಾ?'

'ಅದು ಹಂಗಲ್ಲಾ ಪದ್ಮಾ...' ಎಂದೆನೋ ಉತ್ತರ ಕೊಡಲು ತಡಬಡಿಸಿದರೆ, 'ಪ್ರೊಫೆಸರ್ ಸಾಹೇಬ್ರ, ನಿಮ್ಮ ಕ್ಲಾಸ್ರೂಮ್ ಸಮಾಜಶಾಸ್ತ್ರಾನೇ ಬೇರೆ, ಹೊರಗಿರುವ ನಮ್ಮ ಈ ಸಮಾಜವೇ ಬೇರೆ. ಒಂದು ಆದರ್ಶದ ಬೆಣ್ಣೆ, ಮತ್ತೊಂದು ವಾಸ್ತವದ ಬೆಂಕಿ'



'ಇರಬಹುದು. ಆದರೆ, ನನ್ನ ಆದರ್ಶ ಅನ್ನೋದು ಕರಗುವ ಬೆಣ್ಣೆ ಅಲ್ಲ. ಈ ಸಮಾಜಕ್ಕ ಕೂಗಿ ಕೂಗಿ ಹೇಳ್ತೀನಿ, ಪದ್ಮಾ, ಈ ನಾಟಕದ ಪದ್ಮಾ ನನ್ನ ತಂಗೀ ಅಂತ, ನೋಡ್ತಾ ಇರು'

'ಆವೇಶದ ಮಾತುಗಳು, ಯಾವ ಕಾಲಕ್ಕೂ ಗಟ್ಟಿಯಾಗಿ ನಿಂತಿಲ್ಲ' ಪದ್ಮ ಸಣ್ಣಗೆ ನಕ್ಕಿದ್ದಳು.

ಬಿ.ಎ. ಓದಿರುವ ಪದ್ಮ, ಜೀವನ ತಿಳಿದುಕೊಂಡವಳು. ಅಪ್ಪನ ಅನಾರೋಗ್ಯ, ವಯಸ್ಸಾದ ಕಾರಣ ನಟನೆ ಬಿಟ್ಟ ಅವ್ವ, ಹಣದ ಮುಗ್ಗಟ್ಟು, ಅಂಥದ್ದರಲ್ಲಿಯೆ ಓದು ಮುಂದುವರೆಸಿ ಪದವಿ ಪಡೆದುಕೊಂಡವಳು. ತನ್ನ ತಾಯಿಯ ಆಶೆಯಂತೆ ಬಣ್ಣಬಳಿದುಕೊಂಡು ವೃತ್ತಿರಂಗಭೂಮಿ ಸೇರಿ, ಮನೆಗೆ ನೆರವಾಗಿದ್ದಳು. ಕಂಪನಿ ನಾಟಕಗಳು ಕ್ರಮೇಣ ಆಕರ್ಷಣೆ ಕಳೆದುಕೊಂಡು, ಪದ್ಮಳ ಆದಾಯವೂ ಕಮ್ಮಿಯಾಗಿತ್ತು. ಕರೆಬಂದಾಗೆಲ್ಲ ಹವ್ಯಾಸಿ ತಂಡಗಳಲ್ಲಿ ನಟಿಸುತ್ತ, ಹಾಗೂ ಹೀಗೂ ಬದುಕಿನ ಬಂಡಿ ಎಳೆಯುತ್ತ